ಕೃತಿಯ ಆಶಯ. ಇದು ಕಾರಂತ, ಗೌರೀಶ ಕಾಯ್ಕಿಣಿ, ಶ್ರೀರಂಗ ಮುಂತಾದವರ ವೈಚಾರಿಕ ಕೃತಿಗಳಿಗೆ ಪ್ರೇರಣೆ ಕೊಟ್ಟಿರುವ ಸಾಧ್ಯತೆಯಿದೆ. ನೆಹರೂ ಅವರ 'ಮಗಳಿಗೆ ಬರೆದ ಓಲೆಗಳು' ಕೃತಿಯನ್ನು ನೆನಪಿಸುವ ತಾರಾನಾಥರ 'ತಾಯಂದಿರಿಗೆ ಪತ್ರಗಳು', ಆದರ್ಶ ಸಮಾಜವನ್ನು ರೂಪಿಸುವಲ್ಲಿ ಮಹಿಳೆಯ ಪಾತ್ರವನ್ನು ವಿವೇಚಿಸುವ, ಹೃದಯಂಗಮವಾದ ಗದ್ಯದಲ್ಲಿ ಬರೆಯಲ್ಪಟ್ಟಿರುವ ಇನ್ನೊಂದು ಕೃತಿ. ಕನ್ನಡದಲ್ಲಿ ಸ್ತ್ರೀವಾದವು ಶೈಶಾವಸ್ಥೆಯಲ್ಲಿ ಇರುವಾಗಲೇ, ಈ ಎರಡೂ ಕೃತಿಗಳು ಪ್ರೇಮಾಯತನದಲ್ಲಿ ಬರೆಯಲ್ಪಟ್ಟವು. ಹೀಗೆ ಪ್ರೇಮಾಯತನವು ಒಂದು ಸಮಾಜ ಸುಧಾರಣ ಕಾರ್ಯ ಮತ್ತು ಚಿಂತನೆ ಎರಡನ್ನೂ ಸೃಷ್ಟಿಸಿದ ಕೇಂದ್ರವಾಗಿ ಕೆಲಸ ಮಾಡಿತು.

ಪ್ರೇಮಾಯತನದ ಪ್ರಯೋಗಗಳ ಹಿಂದಿನ ಸಾಮಾಜಿಕ ತಾತ್ವಿಕತೆಯನ್ನು ಅಲ್ಲಿನ ಗ್ರೂಪ್ ಫೋಟೊಗಳು ಪರೋಕ್ಷವಾಗಿ ಕಾಣಿಸುತ್ತವೆ. ಒಂದು ಪಟದಲ್ಲಿ ಅನಕೃ ಮೊದಲಾದ ಲೇಖಕರ ಜತೆ ಸುಮತಿಯವರು, ಸಮಾನಸ್ಕಂಧರಾಗಿ ದಿಟ್ಟಭಾವದಲ್ಲಿ ಕೂತಿದ್ದಾರೆ. ಹೆಚ್ಚಿನ ಫೋಟೊಗಳಲ್ಲಿ ತಾರಾನಾಥರ ಮಿತ್ರರೂ ಶಿಷ್ಯರೂ ಕೂತಿದ್ದು, ಅವರು ವಿಭಿನ್ನ ಧರ್ಮ ಮತ್ತು ಸಾಮಾಜಿಕ ಹಿನ್ನೆಲೆಗಳಿಂದ ಬಂದವರಾಗಿದ್ದಾರೆ. ಯೋಗಪಟು ಬಿ.ಎಸ್.ಕೆ. ಅಯ್ಯಂಗಾರರ ಭೇಟಿಯ ವೇಳೆ ತೆಗೆದ ಪಟದಲ್ಲಿ, ಸುಮತಿಯವರ ಜತೆ ತಾರಾನಾಥರ ಶಿಷ್ಯರಾದ ಜಾನ್ ಹಾಗೂ ಹುಸೇನ್ ಮುಂತಾದವರೆಲ್ಲ ಇರುವರು. ಯಾರಾದರೂ ತಮ್ಮ ಜಾತಿಯ ಬಗ್ಗೆ ಪ್ರಶ್ನಿಸಿದರೆ, ತಾರಾನಾಥರು 'ತಮ್ಮೊಳಗೆ ವಿದ್ಯೆ ವ್ಯಾಪಾರ ಹೋರಾಟ ಸೇವೆ ಮಾಡುವ ನಾಲ್ಕೂ ವರ್ಣದ ಗುಣಗಳಿವೆ' ಎನ್ನುತ್ತಿದ್ದರಂತೆ. ಇದು, ಭಗವದ್ಗೀತೆಯಲ್ಲಿರುವ ಚಾತುರ್ವರ್ಣ ಕುರಿತ ಶ್ಲೋಕವನ್ನು ವ್ಯಕ್ತಿಯ ಗುಣಸ್ವಭಾವ ನೆಲೆಯಿಂದ ಗಾಂಧಿಯವರು ಮಾಡುತ್ತಿದ್ದ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಹುಟ್ಟಿರುವ ಹೇಳಿಕೆಯಂತೆ ತೋರುತ್ತದೆ. ತಾರಾನಾಥರು ಗಾಂಧಿಯವರಿಂದ ಪ್ರಭಾವಿತರಾಗಿದ್ದರೂ, ಪ್ರೇಮಾಯತನದ ಕೆಲವು ಪ್ರಯೋಗಗಳು ಸಾಬರಮತಿಯ ಚಟುವಟಿಕೆಗಳನ್ನು ಮೀರಿಸುತ್ತವೆ. ಪ್ರೇಮಾಯತನ ಹಾಗೂ ಹಮ್‌ದರ್ದ್‌ಗಳಲ್ಲಿ ಕಲಿತ ತಾರಾನಾಥರ ಅನುಕೂಲಸ್ಥ ಶಿಷ್ಯರು ಮತ್ತು ಗೆಳೆಯರು, ಮುಂದೆ ಎಲ್ಲ ಜಾತಿಯ ಮತ್ತು ಧರ್ಮದ ಮಕ್ಕಳನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡು, ಶಿಕ್ಷಣ ಕೊಡಿಸಿದರು. ಪ್ರೇಮಾಯತನದ್ದು, ಅಸ್ಪೃಶ್ಯತೆ, ಧಾರ್ಮಿಕ ದ್ವೇಷ, ಅನಕ್ಷರತೆ ಹಾಗೂ ದೈಹಿಕ ರೋಗಗಳ ಎದುರು ನಡೆಸಿದ ಪ್ರಾಯೋಗಿಕ ಚಳವಳಿಯಾಗಿತ್ತು.

## ಕಲಾವಿದರ ಕಮ್ಮಟ

ಪ್ರೇಮಾಯತನದಲ್ಲಿ ಸಂಗೀತದ ಪ್ರಯೋಗಗಳೂ ನಡೆದವು. ಸ್ವತಃ ಸಂಗೀತಗಾರರಾಗಿದ್ದ ತಾರಾನಾಥರಲ್ಲಿ, ಉತ್ತರ ಕರ್ನಾಟಕದ ಅನೇಕರು ಶಿಷ್ಯವೃತ್ತಿ ಮಾಡಿದರು. ವೃತ್ತಿರಂಗಭೂಮಿಯ ಗವಾಯಿಗಳಾಗಿದ್ದ ಕಸ್ತೂರಿ ವೀರಪ್ಪನವರು, ಬೇನೆಬಿದ್ದು ಪ್ರೇಮಾಯತನಕ್ಕೆ ಬಂದವರು, ಶುಶ್ರೂಷೆ ಪಡೆಯುತ್ತಲೇ ಸಂಗೀತ ಕಲಿತರು. ಸಂಗೀತಕ್ಕೆ ಕಾಯಿಲೆ ಗುಣಪಡಿಸುವ ಶಕ್ತಿಯಿದೆ ಎಂದು ತಾರಾನಾಥರು ನಂಬಿದ್ದರು. ಖ್ಯಾತ ಸಂಗೀತಗಾರರ ಸಮಾಧಿಗಳಿರುವ ಹುಮನಾಬಾದಿನ ಮಾಣಿಕ್ಯನಗರಕ್ಕೆ ಬರುತ್ತಿದ್ದ ಭಾರತದ ಸಂಗೀತಗಾರರು, ಪ್ರೇಮಾಯತನಕ್ಕೂ ಭೇಟಿಕೊಡುತ್ತಿದ್ದರು. ರಾಜೀವರ ಸಂಗೀತ ಕಲಿಕೆ, ಪ್ರೇಮಾಯತನದಲ್ಲೇ ಶುರುವಾಯಿತು. ರಾಜೀವರ ಪ್ರಕಾರ, ತಾರಾನಾಥರು ಮಗ್ಗಿಯನ್ನು ಸಂಗೀತದ ಧಾಟಿಯಲ್ಲಿ ಕಲಿಸುತ್ತಿದ್ದರು. ಹೀಗಾಗಿ, ಅವರ ಶಿಷ್ಯರು ಲೆಕ್ಕ ಮಾಡುವಾಗ, ಸಣ್ಣದನಿಯಲ್ಲಿ ಹಾಡುತ್ತ ಗುಣುಗುಣಿಸುತ್ತ ಇದ್ದರಂತೆ. ಸ್ವತಃ ತಾರಾನಾಥರು ಭಾಷಣಕ್ಕೆ ಮೊದಲು ಒಂದು ಹಾಡನ್ನು ಹಾಡುವ ಪದ್ಧತಿ ಇಟ್ಟುಕೊಂಡಿದ್ದರು. ಗಾಂಧಿಯವರಂತೆ ತಮ್ಮ ಆಶ್ರಮದಲ್ಲೂ ಸಾಮೂಹಿಕ ಭಜನೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು; ಅವರು